ಪುಟ್ಟ ಕಣ್ಣುಗಳನ್ನು ಅರಳಿಸಿಕೊಂಡು ಹೋರಾಟದ ಕಥೆಗಳನ್ನು ಕೇಳುತ್ತಿದ್ದನು. ಅವನ ಕನಸುಗಳಲ್ಲಿ ಯುದ್ಧ ಎಂದರೆ ಶೌರ್ಯ, ಸಾಹಸ, ಜಯಘೋಷ. ಅವನ ತುಂಟ ಮುಖದಲ್ಲಿ ಭಯಕ್ಕೆ ಜಾಗವೇ ಇರಲಿಲ್ಲ.

ಪ್ರತಿ ರಾತ್ರಿ ಊಟದ ಸಮಯದಲ್ಲಿ ಮನೆ ನಗುವಿನಿಂದ ಮತ್ತು ಕೀಟಲೆಗಳಿಂದ ತುಂಬಿರುತ್ತಿತ್ತು. ಗಂಡ ಹಾಗೂ ದೊಡ್ಡ ಮಗ ಇಬ್ಬರೂ ಸೇರಿ, 'ನಮ್ಮ ಮನೆಯ ಯೋಧ!' ಎಂದು ಹಾಸ್ಯ ಮಾಡುತ್ತಾ ಚಿಕ್ಕ ಮಗನನ್ನು ಗೋಳು ಹೊಯ್ಯುತ್ತಿದ್ದರು. ಅದನ್ನು ನೋಡಿ ಚಿಕ್ಕ ತಂಗಿ ಕೇಕೆ ಹಾಕುತ್ತ ನಗುತ್ತಿದ್ದಳು. ಆ ಮನೆಯೊಳಗೆ ನಗುವಿಗೆ ಕೊರತೆಯೇ ಇರಲಿಲ್ಲ. ಈಗ ಆ ನಗುವಿನ ನೆನಪಷ್ಟೇ ಉಳಿದಿದೆ. ಯುದ್ಧ ಎಂಬ ಒಂದು ಪದ ನಮ್ಮ ಬದುಕನ್ನೇ ನಾಶ ಮಾಡಿ ಬಿಟ್ಟಿದೆ ಎಂದು ಬಿಕ್ಕಿದಳು. ಪಕ್ಕದ ಮನೆಯ ಸ್ನೇಹಿತೆಯ ದುರಂತ ನೆನಪಾಗಿ 'ಇದು ನನ್ನ ಮನೆ ಬಾಗಿಲಲ್ಲಾಗಿದ್ದರೆ?' ಎಂಬ ಆಲೋಚನೆ ಅವಳ ಎದೆಗೆ ಕಲ್ಲಿನಂತೆ ಬಿದ್ದಾಗ ದೇಹ ನಡುಗಿತು. ಒಂದು ಕ್ಷಣ ಅವಳಿಗೆ ಉಸಿರೇ ನಿಂತ ಅನುಭವವಾಯಿತು.

'ಮಗನೆ, ನೀನು ಬರುತ್ತಿಯಾ ಅಲ್ಲವೇ?' ಎಂದು ಶೂನ್ಯವನ್ನು ಉದ್ದೇಶಿಸಿ ಕೇಳಿದಳು. ಹೊರಗಿನ ಕತ್ತಲು ನಿಧಾನವಾಗಿ ಒಳಗೆ ಬರುತ್ತಿರುವಂತೆ ತೋಚಿತು. ಕತ್ತಲು ಬೆಳಕನ್ನು ಆಪೋಷನ ತೆಗೆದು ಕೊಳ್ಳಲು ಬರುತ್ತಿದ್ದಂತೆ, ಬೆಳಕು ಕೂಡ ಉತ್ತರವನ್ನೇ ಕೊಡದೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತ ಓಡಿ ಹೋದಂತೆ ಆಕೆಗೆ ಅನಿಸಿತು.

ಈ ಹೋರಾಟದ ದಿನಗಳು ಅಂತ್ಯವೇ ಇಲ್ಲದ ಅನಂತದಂತೆ ತೋರುತ್ತಿದ್ದವು. ಪ್ರತಿದಿನವೂ ಸೂರ್ಯ ಉದಯವಾಗುತ್ತಿದ್ದರೂ ಅವಳೊಳಗೆ ಮಾತ್ರ ಕತ್ತಲೆ ಭದ್ರವಾಗಿ ಬೇರುಬಿಟ್ಟು ಕುಳಿತಿತ್ತು. ಮಗಳು ರಾತ್ರಿ ನಿದ್ರೆಯಲ್ಲಿ ತಲ್ಲಣಿಸಿ 'ಅಣ್ಣಾ' ಎಂದು ಕೂಗುತ್ತಾ ಬಿಕ್ಕುತ್ತಿದ್ದಳು. ಆ ಕೂಗು ಕಿಮ್‌ನ ಹೃದಯವನ್ನು ಚೂರಾಗಿಸುತ್ತಿದ್ದವು. ಕಿಮ್ ಅವಳನ್ನು ಎದೆಗೆ ಒತ್ತಿಕೊಂಡು ನಿಟ್ಟುಸಿರಿನೊಂದಿಗೆ ಕಣ್ಣೀರನ್ನು ನುಂಗುತ್ತಿದ್ದಳು. ಒಂದೊಮ್ಮೆ ಅವನು ಮರಳಿ ಬರದೆ ಹೋದರೆ ನಮ್ಮ ಗತಿಯೇನು ಎಂಬ ಆಲೋಚನೆಯೇ ಅವಳ ಅಸ್ತಿತ್ವವನ್ನು ಅಸ್ಥಿರಗೊಳಿಸಿ, ಭಯವು ನರಗಳ ಮೂಲಕ ಹರಿದು ಕಾಲುಗಳವರೆಗೆ ಹರಿದು ನಡುಗುವಂತೆ ಮಾಡುತ್ತಿತ್ತು. ಆ ರಾತ್ರಿ ಕಿಮ್ ಕಣ್ಣು ಮುಚ್ಚಲಿಲ್ಲ. ಬಾಗಿಲಿನ ಹೊರಗೆ ಕೇಳಿದ ಪ್ರತಿಯೊಂದು ಹೆಜ್ಜೆಯ ಸದ್ದಿಗೂ ಅವಳ ಹೃದಯ ಭಯದಿಂದ ಬಡಿದುಕೊಳ್ಳುತ್ತಿತ್ತು.

* * *

ಮರುದಿನವೂ ಅದೇ ಘಟನೆ ಮರುಕಳಿಸಿತು. ಯಾರಿಗೂ ಏನಾಗುತ್ತಿದೆ ಎಂಬುದು ಸ್ಪಷ್ಟವಾಗಲಿಲ್ಲ. ಕಮಾಂಡರ್ ಥಾವ್ ಏನೋ ಅರಿತವರಂತೆ ಆ ಮೌನವನ್ನು ಮುರಿಯುತ್ತಾ 'ಯಾರಾದರೂ ಮೂತ್ರಕ್ಕೆ ಹೋದ ಸ್ಥಳಗಳಲ್ಲಿ ಮಾತ್ರ ಬಾಂಬ್ ದಾಳಿಯಾಗುತ್ತಿದೆ ಎಂದರೆ, ಯಾವುದೋ ಯಂತ್ರ ನಮ್ಮ ಮೇಲೆ ಕಣ್ಣು ಇಟ್ಟಿದೆ. ಅವರು ನಮ್ಮ ವಾಸನೆ ಹಿಡಿಯುತ್ತಿದ್ದಾರೆ' ಎಂದಾಗ ಕ್ಷಣಕಾಲ ಯಾರೂ ಮಾತಾಡಲಿಲ್ಲ. 'ನಾಯಿಗಳಿಗಿಂತ ಕ್ರೂರ ಯಂತ್ರಗಳು' ಎಂದು ಒಬ್ಬನು ಸಿಟ್ಟಿನಿಂದ ಗುನುಗಿದ. ಇನ್ನೊಬ್ಬನ ಮುಖದಲ್ಲಿ ಹೆದರಿಕೆಯ ಛಾಯೆ. ಥಾವ್ ಕ್ಷಣಕಾಲ ಮೌನವಾಗಿದ್ದರು. ಬಳಿಕ ಏನನ್ನೋ ನಿರ್ಧಾರ ಮಾಡಿದಂತೆ ದೃಢವಾದ ಧ್ವನಿಯಲ್ಲಿ 'ಶತ್ರುಗಳು ನಮ್ಮ ದೇಹವನ್ನ ಹುಡುಕುತ್ತಿದ್ದಾರೆ ಎಂದರೆ, ದೇಹದ ಗುರುತನ್ನೇ ನಾವು ಆಯುಧವನ್ನಾಗಿ ಮಾಡಬೇಕು' ಎಂದಾಗ ಎಲ್ಲರೂ ಒಬ್ಬರನ್ನೊಬ್ಬರು ನೋಡಿದರು. ಭಯದ ಮಧ್ಯೆ ಮೊದಲ ಬಾರಿ ಒಂದು ಆಶೆಯ ಬೆಳಕಿನ ಕಿರಣ ಅವರನಿಗೆ ಸಿಕ್ಕಿತು.

ಆ ರಾತ್ರಿ ಗುಹೆಯೊಳಗೆ ಮಡಕೆಗಳನ್ನು ಜಾಗ್ರತೆಯಿಂದ ಸಾಲಾಗಿ ಇಡಲಾಯಿತು. ಯಾರೂ ಮಾತನ್ನಾಡಲಿಲ್ಲ. ನಾಚಿಕೆ ಇರಲಿಲ್ಲ. ಅಸಹ್ಯವೂ ಇರಲಿಲ್ಲ. ದೇಶವನ್ನು ಉಳಿಸಬೇಕೆಂಬ ಮೌನ ನಿರ್ಧಾರ ಮಾತ್ರ. ಆ ಮೂತ್ರ ತುಂಬಿದ ಮಡಕೆಗಳನ್ನು ನಿಧಾನವಾಗಿ ಮರಗಳಿಗೆ ನೇತು ಹಾಕಿದರು. ಕಾಡಿನ ಉಷ್ಣತೆಯಲ್ಲಿ ವಾಸನೆ ನಿಧಾನವಾಗಿ ಗಾಳಿಗೆ ಬೆರೆತು ಹರಿಯತೊಡಗಿತು.

ಲಿನ್ ದೂರದ ಮರವನ್ನು ಹತ್ತಿ ಆಕಾಶವನ್ನು ನೋಡುತ್ತಿದ್ದ. ಸ್ವಲ್ಪ ಹೊತ್ತಿನ ಬಳಿಕ ಮೇಲಿಂದ ಮತ್ತೆ ಕಬ್ಬಿಣದ ರೆಕ್ಕೆಗಳ ಕಂಪನ. ಆ ರೆಕ್ಕೆಗಳ ನಡುವಿನಿಂದ ಕೆಂಪು ಬೆಳಕೊಂದು ಮಿನುಗಿತು. ಕೆಲವೇ ಕ್ಷಣಗಳಲ್ಲಿ